2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ವ ಪ್ರ.ದ.ನಾ.ದ. ಭದ್ರಾವತಿ

ಪಿಸಿಆರ್. ನಂಃ **331 /2023**

ಪಿಡಬ್ಲು-**3**

| | | |
|---|---|---|
| ಹೆಸರು | : | ಫಾಜಿಲ್ ತನ್ವೀರ್ ಅಹಮ್ಮದ್ |
| ವಯಸ್ಸು | : | 58 |
| ಉದ್ಯೋಗ | : | ಖಾಸಗಿ ಉದ್ಯೋಗಿ |
| ವಾಸಸ್ಥಳ | : | ಸೀಗೆ ಬಾಗಿ ಭದ್ರಾವತಿ |

**ದಿನಾಂಕಃ 09-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಿರ್ಯಾದುದಾರರ ಸ್ವ ಇಚ್ಛಾ ಹೇಳಿಕೆ**

ನಾನು ಸೀಗೆ ಬಾಗಿಯಲ್ಲಿರುವ ಅಲ್ ಫ್ಹೂರ್ ಖಾನ್ ಮಸೀದಿಯ ಕಾರ್ಯದರ್ಶಿ ಆಗಿರುತ್ತೇನೆ. ಮಸೀದಿಯ ಜಾಗದಲ್ಲಿ ಪಿರ್ಯಾದುದಾರರು ಮತ್ತು ಇತರರು ಮಸೀದಿ ಕಟ್ಟಡವನ್ನು ಕಟ್ಟುತ್ತಿದ್ದರು. ಆ ರೀತಿ ಕಟ್ಟಡ ಕಟ್ಟಲು ಪರವಾನಗೆ ಪಡೆದಕೊಂಡಿರುತ್ತೇವೆ. ನಾವು ಮಸೀದಿ ಕಟ್ಟಡ ಕಟ್ಟಲು ಪ್ರಾರಂಭಿಸಿದಾಗ ಬಾಬು ಎನ್ನುವಾತ ಮಸೀದಿ ಕಟ್ಟ ಬಾರದು ಎಂದು ತಕರಾರು ಮಾಡಲು ಪ್ರಾರಂಭಿಸಿರುತ್ತಾನೆ. ಅದಕ್ಕೆ ಆತನ ವಿರುದ್ಧ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ನಿರ್ಬಂಧಕಾಜ್ಞೆ ಪಡೆದುಕೊಂಡಿರುತ್ತೇವೆ. ಬಾಬು ಎನ್ನುವಾತ ದಿಃ 13-08-2023 ರಂದು ತೊಂದರೆ ನೀಡಿರುತ್ತಾನೆ. ಎಸ್ ಬಾಬು ಎನ್ನುವಾತ ನಮ್ಮ ವಿರುದ್ಧ ಪೋಲೀಸರಿಗೆ ದೂರನ್ನು ನೀಡಿರುತ್ತಾನೆ. ನಾನು ಆ ದಿನ ಊರಿನಲ್ಲಿ ಇರಲಿಲ್ಲ ಹೈದರಾಬಾದಿನಲ್ಲಿ ಇದ್ದೆ. ಆತನು ಪಿರ್ಯಾದುದಾರರ ತನ್ನೀರ್ ಅಹಮ್ಮದ್ ಹಾಗೂ ಜಲೀಲ್ ಎನ್ನುವವರ ವಿರುದ್ಧ ದೂರು ನೀಡಿರುತ್ತಾನೆ. ದಿಃ 29-08-2023 ರಂದು ಪಿರ್ಯಾದುದಾರರು ಆರೋಪಿತನ ವಿರುದ್ಧ ಪೋಲೀಸ್

ದೂರನ್ನು ನೀಡಿದ್ದು ಅವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ನಾನು ಅಪರಾಧ ಸಂಖ್ಯೆ:115/2023 ರ ಪ್ರ.ವ.ವರದಿಯನ್ನು ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ-18 ಎಂದು, ದೂರನ್ನು ನಿಪಿ-19 ಎಂದು ಗುರುತಿಸಲಾಯಿತು .

ಆರೋಪಿತನ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಳಬೇಕಾಗಿ ಕೇಳಿಕೊಳ್ಳುತ್ತೇನೆ.

(ತೆ ನ್ಯಾ. ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

(ನಾಸಿರ ಬಾನು)

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾದಂ. ಭಧ್ರಾವತಿ**